Medical Graduates working as Local Candidates in the various Hospitals and Medical Colleges in the State.

*Q.—951: Sri B. H. LAKSHMANAIAH (Belur).—

Will the Government be pleased to state :—

(a) the number of Medical Graduates who are at present working as Local Candidates in the various Hospitals and Medical Colleges in the State;

(b) whether it is a fact that almost all of them have not been confirmed so far;

(c) whether it is not a fact that the Government had assured on the floor of the Assembly that all the Local Candidates would be confirmed giving consideration for their service, pay, etc. ?

A.—Sri K. NAGAPPA ALVA (Minister for Health):—

(a) 185.

(b) Yes.

(c) No. The question is being examined.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—185 ಜನ ಲೋಕಲ್ಲು ಕ್ಯಾಂಡಿಡೇಟುಗಳನ್ನು ಖಾಯಂ ಮಾಡಲು ಇರುವ ತೊಂದರೆಗಳೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಇವೆಲ್ಲಾ ಗೆಜೆಟೆಡ್ಡು ಪೋಸ್ಟುಗಳು. ಪಬ್ಲಿಕ್ ಸರ್ವಿಸ್ಸು ಮುಖಾಂತರವೇ ಇವರನ್ನು ನೇಮಿಸಬೇಕಾಗುತ್ತದೆ. ಇಪ್ಪತ್ತರಲ್ಲೇ 160 ಹುದ್ದೆಗಳಿಗಾಗಿ ಪಬ್ಲಿಕ್ ಸರ್ವಿಸ್ ಮುಖಾಂತರ ನೋಟಿಫಿಕೇಷನ್ನು ಕಳುಹಿಸುವುದರಲ್ಲಿದ್ದಾರೆ. ಅದರಲ್ಲಿ ಕೆಲವರು ಇದಕ್ಕೆ ಅರ್ಜಿಗಳನ್ನು ಹಾಕಿಕೊಳ್ಳಬಹುದು. ಅಲ್ಲದೆ ಇದರ ಬಗ್ಗೆ ಕೇಡರು ಮತ್ತು ರೆಕ್ರೂಟುಮೆಂಟು ರೂಲ್ಸುಗಳೂ ಅಖೈರಾಗಿ ಆಗಿರಲಿಲ್ಲ. ಇವೆಲ್ಲಾ ಆಗಿ ಫೆಬ್ರವರಿ ತಿಂಗಳ ಮೇಲೆ ಇದಕ್ಕೆಲ್ಲಾ ಸರಿಯಾದ ಏರ್ಪಾಡುಗಳನ್ನು ಮಾಡಲಾಗುತ್ತದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—(ಸಿ)ಗೆ ಉತ್ತರವಾಗಿ ನಿಜವಲ್ಲ, ಆ ವಿಷಯವನ್ನು ಪರ್ಯಾಲೋಚಿಸುತ್ತಿದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ ಯಾವುದು ನಿಜ ? ಯಾವುದು ಸುಳ್ಳು ?

Mr. SPEAKER.—Both the answers are correct.

Sri G. DUGGAPPA.—Sir, there are about 185 local candidates working in various hospitals and Medical Colleges. Can the Government, if they mind, terminate the services of these candidates at any time and the services of how many of such candidates have been terminated without referring to the P.S.C. ?

Sri K. NAGAPPA ALVA.—We have not terminated the services of any body, Sir.

Sri G. DUGGAPPA.—Sir, the services of some candidates have been terminated.

Mr. SPEAKER.—What can I do ? He can put a question stating that the services of such and such an officer have been terminated.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಪಿ.ಎಸ್.ಸಿ. ಮುಖಾಂತರ ಡಾಕ್ಟರುಗಳನ್ನು ತೆಗೆದುಕೊಂಡಾಗ ಅವರ ಸರ್ವೀಸಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಸರಕಾರ ಅವರಿಗೆ ಎಲ್ಲ ಪ್ರಯೋಜನ ಸಿಗುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತದೆ.

Sri J. P. SARWESH.—Sir, after how many years of service, a Government official is treated as permanent ?

Sri K. NAGAPPA ALVA.—Only after they come before the Public Service Commission, they will be made permanent.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 185 ಡಾಕ್ಟರುಗಳು ಎಷ್ಟು ವರ್ಷ ಎಂದರೆ 1 ವರ್ಷದಿಂದ 5 ವರ್ಷ ಅಥವಾ 2 ರಿಂದ 3 ವರ್ಷ, ಹೀಗೆ ಎಷ್ಟು ವರ್ಷ ಸರ್ವೀಸ್ ಮಾಡಿದ್ದಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ಸಾಮಾನ್ಯವಾಗಿ 1 ವರ್ಷದಿಂದ 4 ವರ್ಷದವರೆಗೆ ಇದ್ದಾರೆ.

Sri G. DUGGAPPA.—Whether it is not a fact that in the Mint Hospital the services of one duly qualified candidate who was appointed as a local candidate were terminated and some other person was appointed in his place who was not duly qualified ?

Sri K. NAGAPPA ALVA.—It has not come to the notice of the Government, Sir.,

Sri K. H. RANGANATH.—Out of these 185, how many are working in hospitals and how many in Medical Colleges ?

Sri K. NAGAPPA ALVA.—85 are working in the Medical Colleges.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಇಂಟರ್‌ವ್ಯೂ ಆದವರಿಗೆ ಸೀನಿಯಾರಿಟಿ, ಕ್ವೇ, ವಗೈರೆ ಬೆನಿಫಿಟ್ಟುಗಳೆಲ್ಲವನ್ನೂ ತಾವು ಕೊಡುತ್ತೇವೆಂದು ಹೇಳಿದ್ದೀರ. ಬೆನಿಫಿಟ್ಟುಗಳೆಲ್ಲವನ್ನೂ ತಾವು ಕಡ್ಡಾಯವಾಗಿ ಕೊಡುವ ನಿರ್ಧಾರಕ್ಕೆ ಬಂದಿದ್ದೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಕಡ್ಡಾಯವಾಗಿ ಕೊಡುವ ವಿಷಯದಲ್ಲಿ ಏನೂ ಉತ್ತರ ಕೊಡಲಿಕ್ಕೆ ಸಾಧ್ಯವಿಲ್ಲ. ಆದರೆ ಎಷ್ಟರಮಟ್ಟಿಗೆ ಅವರಿಗೆ ಅನುಕೂಲತೆಗಳನ್ನು ಕೊಡಬಹುದು ಎಂದು ನೋಡಿ ಕೊಂಡು ಆ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲು ಸರಕಾರ ಪರ್ಯಾಲೋಚನೆ ಮಾಡುತ್ತಾ ಇದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—1 ವರ್ಷದಿಂದ 4 ವರ್ಷದವರೆಗೆ ಸರ್ವೀಸು ಮಾಡಿದವರು ಇದ್ದಾರೆ ಎಂದು ಹೇಳಿದಿರಿ. 1ರಿಂದ 9 ವರ್ಷದವರೆಗೆ ಸೇವೆ ಸಲ್ಲಿಸಿರುವವರು ಇದ್ದಾರೆಂಬುದು ತಮಗೆ ಗೊತ್ತಿದೆಯೆ ? ಈ ಮಾನ್ಯ ಸಭೆಯವರು ಈ ಡಾಕ್ಟರುಗಳ ಬಗ್ಗೆ ಆಕಾಂಕ್ಷೆಯುಳ್ಳವರಾಗಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—9 ವರ್ಷದವರು ಇರುವುದು ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ಉತ್ತರಕೊಟ್ಟಿದ್ದೇನೆ. ಇವರ ವಿಷಯದಲ್ಲಿ ಮಾನ್ಯ ಸಭೆಗೇ ಅಲ್ಲ ಸರಕಾರಕ್ಕೆ ಕೂಡ ಆಕಾಂಕ್ಷೆ ಇದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ರಿಕ್ರೂಟ್‌ಮೆಂಟ್ ರೂಲ್ಸ್ ಕಂಪ್ಲೀಟಾಗಿದ್ದರೆ ಮೊದಲು ರಿಕ್ರೂಟ್ ಮಾಡಿರುವುದು ಕಾನೂನಿಗೆ ವಿರುದ್ಧವಲ್ಲವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಕಾನೂನಿಗೆ ವಿರುದ್ಧವಲ್ಲ. ಕಾನೂನಿಗೆ ವಿರುದ್ಧವಾದುದನ್ನು ಮಾಡಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈ 185 ಜನರಲ್ಲಿ ಮಹಿಳೆಯರು ಎಷ್ಟು ಇದ್ದಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ಮಹಿಳೆಯರು ನಾಕಷ್ಟು ಇದ್ದಾರೆ ಎಂದು ಮಾತ್ರ ಹೇಳಬಹುದು

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಆಸ್ಪತ್ರೆಯಲ್ಲಿರುವ ಪದವೀಧರ ವೈದ್ಯಕೀಯ ಅಧಿಕಾರಿಗಳೆಷ್ಟು ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಸಂಖ್ಯೆ ಇಲ್ಲಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—10-16 ವರ್ಷಗಳಿಂದ ಆಸ್ಪತ್ರೆಗಳಲ್ಲಿ ಡಾಕ್ಟರುಗಳ ಜಾಗ ಖಾಲಿ ಇದ್ದರೂ, ಈ ಸಭೆಯಲ್ಲಿ ಅವುಗಳ ಬಗ್ಗೆ ಒತ್ತಾಯ ಮಾಡುತ್ತಿದ್ದರೂ ಲೋಕರ್ ಕ್ಯಾಂಡಿಡೇಟುಗಳನ್ನು ಕ್ಲಿಯರ್ ಮಾಡದೆ ರಿಕ್ರೂಟ್ ಮಾಡದೆ ಇರುವುದಕ್ಕೆ ಕಾರಣಗಳೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಇದಕ್ಕೆ ಕಾರಣಗಳನ್ನು ಇಷ್ಟರಲ್ಲಿಯೇ ತಿಳಿಸಿದ್ದೇನೆ. ಟೀಚಿಂಗ್ ಪೋಸ್ಟುಗಳ ಬಗ್ಗೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿದ್ದೇವೆ, ಅದರಲ್ಲಿ ಏನೂ ತಡವಾಗುವುದಿಲ್ಲ.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್ ಷಾ.—ಈ ಲೋಕರ್ ಕ್ಯಾಂಡಿಡೇಟುಗಳಲ್ಲಿ ಎಷ್ಟು ಮಂದಿ ಸ್ವೇಟ್ ಹೊರಗಡೆ ಹೋಗಿದ್ದಾರೆಂಬ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೊಡುತ್ತೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಅಂಕಿ ಸಂಖ್ಯೆ ಇಲ್ಲಿ ಇಲ್ಲ.

Sri S. M. KRISHNA.—Sir, how many more Medical Graduates would the Government require for various hospitals and Medical Colleges in our State ?

Sri K. NAGAPPA ALVA.—We have advertised for 160 posts. Another 150 we will require.

ಶ್ರೀ ಎಸ್. ಗೋಪಾಲ ಗೌಡ.—ಮೈಸೂರು ಸರಕಾರದವರು ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಅವರನ್ನು ಖಾಯಂ ಮಾಡುವುದರಲ್ಲಿ ತೀರ ವಿಳಂಬ ಮಾಡಿರುವುದರಿಂದ ಮತ್ತು ಅವರಿಗೆ ಕೊಡುವ ಸಂಬಳ ಸಾರಿಗೆ ಚೆನ್ನಾಗಿಲ್ಲದಿರುವುದರಿಂದ, ಬಹಳ ಜನ ಪ್ರೈವೇಟ್ ಪ್ರಾಕ್ಟೀಶನರು ಗಳಾಗಿ ಹೋಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ತಾವು ಹೇಳಿದಷ್ಟರಮಟ್ಟಿಗೆ ಇಲ್ಲ; ಅದು ಸರಕಾರದ ಗಮನದಲ್ಲಿ ಇದೆ.

Sri A. P. APPANNA.—Sir, is it not a fact that these graduates are being treated as local candidates for a long time though the Government is not in a position to attract more Medical Graduates to Government service ?

Sri K. NAGAPPA ALVA.—Yes, Sir, to some extent it is true.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಿಪಟೂರು ಜನರಲ್ ಆಸ್ಪತ್ರೆಯಲ್ಲಿ ಒಬ್ಬರೂ ಡಾಕ್ಟರಿಲ್ಲದೆ ಅದನ್ನು ಓಪನ್ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ಒಬ್ಬರೂ ಡಾಕ್ಟರು ಇಲ್ಲದೆ ಆಸ್ಪತ್ರೆ ಓಪನ್ ಮಾಡಿದ್ದಾರೆ ಎಂಬ ಮಾತು ಸರಿ ಅಲ್ಲ.

Sri A. P. APPANNA.—Is it not a fact that in Coorg District there are more than 10 hospitals, without any doctors ?

Mr. SPEAKER.—I think such a question was asked recently and a number of supplementaries were put.

Sri G. V. GOWDA.—How many places are there where even local candidates are not appointed ?

Mr. SPEAKER.—Are there any candidates available who have not been appointed ?

Sri K. NAGAPPA ALVA.—Wherever doctors were available, we have appointed them. There were vacancies; local candidates were not available and so they were not appointed.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ತಾವು ಹೋದ ಸೆಷನ್ನಿನಲ್ಲಿ ರೋಕರ್ ಕ್ಯಾಂಡಿಡೇಟುಗಳು ಹಿಂದೆ ಮಾಡಿದ ಸರ್ವೀಸು ರೆಗ್ಯುಲರೈಸ್ ಮಾಡಿಕೊಡುವುದಲ್ಲದೆ, ಅವರಿಗೆ ಸೀನಿಯಾರಿಟಿ, ಜೇ, ಪಗ್ಯೆರೆ ಬೆನಿಫಿಟ್ಟುಗಳನ್ನೂ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ಆ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ? ಆ ಭರವಸೆಯನ್ನು ನೆರವೇರಿಸಿ ಕೊಡುತ್ತೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಭರವಸೆ ಕೊಟ್ಟ ಪ್ರಕಾರ ಅದಕ್ಕೆ ಬೇಕಾದ ಕ್ರಮಗಳನ್ನು ತೆಗೆದು ಕೊಂಡಿದ್ದೇವೆ ಎಂದು ಇಷ್ಟರಲ್ಲಿಯೆ ಹೇಳಿದ್ದೇನೆ.

1-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು ಅಕ್ಟೋಬರ್ ತಿಂಗಳಿನಲ್ಲಿ ಇದೇ ತರಹ ಪ್ರಶ್ನೆಗೆ ಉತ್ತರ ಕೊಡುತ್ತ, ಒಂದು ವರ್ಷದಿಂದ ಎಂಟು ವರ್ಷದವರೆಗೆ ಸರ್ವೀಸಾದವರು 189 ಜನರಿದ್ದಾರೆ, 10 ವರ್ಷದ ಮೇಲ್ಪಟ್ಟವರು 4 ಜನರಿದ್ದಾರೆ ಅವರನ್ನು ಕನ್‌ಫರ್ಮ್ ಮಾಡುವುದಕ್ಕೆ ಸರ್ವಿಸ್ ಕಮಿಷನ್ನಿನೊಡನೆ ವ್ಯವಹರಿಸುತ್ತೇವೆಂದು ಹೇಳಿದರು. ಸರ್ಕಾರದ ಈ ಡೋಲಾಯಮಾನ ನೀತಿಯಿಂದ ಅನೇಕ ಆಸ್ಪತ್ರೆಗಳು ಡಾಕ್ಟರುಗಳಿಲ್ಲದೆ ಇರುವುದು ಸರ್ಕಾರಕ್ಕೆ ಮನದಟ್ಟಾಗಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಡೋಲಾಯಮಾನದ ವಿಷಯ ನನಗೆ ಅರ್ಥವಾಗುವುದಿಲ್ಲ.....

ಅಧ್ಯಕ್ಷರು.—ಪ್ರಶ್ನೆಯೇ ಡೋಲಾಯಮಾನವಾಗಿದೆ.

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿಷಯದಲ್ಲಿ ಸಾಧ್ಯವಾದ ಕ್ರಮಗಳೆಲ್ಲವನ್ನೂ ನಾವು ತೆಗೆದು ಕೊಳ್ಳುತ್ತಿದ್ದೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಈ ರೀತಿ ಇರುವವರನ್ನು ಖಾಯಂ ಮಾಡದೆ ಇರುವುದರಿಂದ ಕಳೆದ ಎರಡು ವರ್ಷಗಳಿಂದ ಅವರ ಕೆಲಸಗಳಿಗೆ ರಾಜಿನಾಮೆ ಕೊಟ್ಟಿರುವವರು ಎಷ್ಟು ಜನ, ಸ್ವಾಮಿ ?

ಶ್ರೀ ಕೆ. ನಾಗಪ್ಪ ಆಳ್ವ.—ಇದಕ್ಕಾಗಿ ರಾಜಿನಾಮೆ ಕೊಟ್ಟ ವಿಷಯ ನನಗೆ ಗೊತ್ತಿಲ್ಲ. ಕೆಲವರು ಬೇರೆ ಬೇರೆ ಕಾರಣಗಳಿಗಾಗಿ ರಾಜಿನಾಮೆ ಕೊಟ್ಟಿದ್ದಾರೆ.

Sri S. M. KRISHNA.—Is it not a fact that owing to the 'Hamlet-like' policy of hesitation followed by the Government, demoralisation has set in the medical services ?

ಶ್ರೀ ಕೆ. ನಾಗಪ್ಪ ಆಳ್ವ.—ಇದರಲ್ಲಿ ಡಿಮಾರಲೈಸೇಷನ್ ಏನೂ ಇಲ್ಲ. ಸ್ವಲ್ಪ ಮಟ್ಟಿಗೆ ಡಿಸಪಾಯಿಂಟ್‌ಮೆಂಟ್ ಇದೆ ಎನ್ನುವ ವಿಷಯವನ್ನು ನಾನು ಒಪ್ಪುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಈ ಡಿಸಪಾಯಿಂಟ್‌ಮೆಂಟ್ ಎಷ್ಟು ಪ್ರಮಾಣದಲ್ಲಿದೆ ಎನ್ನುವುದನ್ನು ತಾವು ಅಳತೆ ಮಾಡಿದ್ದೀರಾ ?

Mr. SPEAKER.—What is the yard stick ?

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಈಗಾಗಲೇ ಲೋಕರ್ ಕ್ಯಾಂಡಿಡೇಟ್ಸ್ ಮತ್ತು ಹೊಸದಾಗಿ ಪಾಸಾಗಿರುವವರ ಇಂಟರ್‌ವ್ಯೂ ಆಗಿರುವುದರಿಂದ ಲೋಕರ್ ಕ್ಯಾಂಡಿಡೇಟ್ಸ್‌ಗೆ ಅವರವರ ಸರ್ವಿಸ್ ಪೇರೆ ಜಾಗವನ್ನು ಪೇಲ್ಲಡೆ ಕೊಡುವುದಕ್ಕೆ ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷನ್ ಜೊತೆಯಲ್ಲಿ ಮಾತುಕತೆ ನಡೆಸಿ ಅವರಿಗೆ ಸಿಕ್ಕಬೇಕಾದ ಬೆನಿಫಿಟ್ಸ್ ಸಿಕ್ಕುವುದಕ್ಕೆ ರಕ್ಷಣೆಯನ್ನು ಕೊಡುತ್ತಾರೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ನಾವು ಬೇಕಾದ ರೀತಿಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನೊಡನೆ ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ನಿನೊಡನೆ ವಿಚಾರಿಸಿ ಅದಕ್ಕೆ ಬೇಕಾದ ಕ್ರಮ ತೆಗೆದುಕೊಳ್ಳುತ್ತೇವೆ.

Sri K. H. RANGANATH.—Out of the 85 doctors working in the medical colleges may I know how many are working as Assistant Professors, Associate Professors and Professors ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿವರ ಇಲ್ಲಿಲ್ಲ.

ಶ್ರೀ ಎ. ಕೃಷ್ಣ ಶೆಟ್ಟಿ.—ಇ. ಎಸ್. ಐ. ಯೋಜನೆಗೆ ಸಂಬಂಧಪಟ್ಟ ಆಸ್ಪತ್ರೆಗಳಿಗೆ ಹೋಗುವಷ್ಟು ಆಕರ್ಷಣೆಯಿಂದ ಲೋಕರ್ ಕ್ಯಾಂಡಿಡೇಟ್ಸ್ ಸರ್ಕಾರಿ ಕೆಲಸಗಳಿಗೆ ಬರುವುದಿಲ್ಲ. ಇದಕ್ಕೆ ಕಾರಣವೇನು, ಸ್ವಾಮಿ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೇನೂ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಮಂತ್ರಿಗಳು ಅಪ್ಪಣೆ ಮಾಡಿದರು, ಜಿ.ಎ.ಡಿ. ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ ಇವರ ಜೊತೆ ಮಾತನಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಆ ಮಾತುಕತೆಯ ಪರಿಣಾಮವೇನು ಮತ್ತು ಅದರ ಫಲವಾಗಿ ಏನಾದರೂ ಲೋಕರ್ ಕ್ಯಾಂಡಿಡೇಟ್‌ಗಳಿಗೆ ದೊರೆಯಬೇಕಾದ ಅನುಕೂಲತೆಗಳು ದೊರೆಯುತ್ತವೆಯೇ ?

Mr. SPEAKER.—Is the Hon'ble Member improving the interests of these candidates by asking details of this type ?

Sri G. A. THIMMAPPA GOWDA.—It is a question of life and death to the local candidates. The Minister is evading to give specific answers.

Sri K. NAGAPPA ALVA.—I am not evading at all. These details cannot be given here. I have already assured the House that everything possible will be done to take into account the benefit of their past services.

Sri J. P. SARWESH.—Is the Government responsible or the P.S.C. responsible for this prolonged delay ? Has the Government written to the P.S.C. and if so when ?

Sri K. NAGAPPA ALVA.—The Government could not send the cases of these candidates to the P.S.C. for the reason that the Cadre and Recruitment Rules could not be finalised.

Mr. SPEAKER.—Questions 964 and 1090 are held over. Next Question.

Cases registered by the Special Police of the C.I.D. with regard to the Illegal Transportation of Cement and Steel from the Sharavathy Works Projects Area.

*Q.—977. Sri S. M. KRISHNA (Maddur).—

Will the Government be pleased to state:—

(*a*) the number of cases registered by the Special Police of the C. I. D. with reference to the illegal transportation of cement and steel from the Sharavathy Works Project Area;

(*b*) whether they have made any further investigation in this matter;

(*c*) the action taken by them to halt such misfeasance?

*A.—Sri R. M. PATIL (Minister for Home).—

(*a*) Two.

(*b*) Yes.

(*c*) Action has been taken to enforce a strict watch over the stores to prevent such cases of misuse, theft, etc., by P.W.D. Authorities.

ಶ್ರೀ ಎಸ್. ಎಂ. ಕೃಷ್ಣ.—ಕಬ್ಬಿಣ ಮತ್ತು ಸಿಮೆಂಟ್ ಕಳ್ಳ ಸಾಗಾಣಿಕೆಯ ಎರಡು ಕೇಸುಗಳನ್ನು ರಿಜಿಸ್ಟರ್ ಮಾಡಿದ್ದೇವೆಂದು ಹೇಳಿದ್ದಾರೆ. ಕಬ್ಬಿಣ ಮತ್ತು ಸಿಮೆಂಟ್ ಎಷ್ಟು ಪ್ರಮಾಣದಲ್ಲಿ ಸಾಗಾಣಿಕೆ ನಡೆಯಿತು ಎನ್ನುವುದರ ವಿವರವನ್ನು ಒದಗಿಸುವುದಕ್ಕೆ ಸಾಧ್ಯವೇ, ಸ್ವಾಮಿ?

†Sri R. M. PATIL.—The steel case was detected only once and cement was detected in 3 or 4 trucks.

Sri C. J. MUCKANNAPPA.—What is the quantity of cement and steel that was siezed by the Police?

Sri R. M. PATIL.—Steel: 42.44 tons and cement: 36 bags. In all 623 bags of cement was involved. An audit has to be made and in case it is found that this quantity of cement belongs to the project, the question of taking action will be considered.

Sri C. J. MUCKANNAPPA.—When the lorries were seized by the C. I. D. were there only drivers and cleaners, or was there any official belonging to this department or the owner of the lorry.

Sri R. M. PATIL.—These are all matters for investigation and it is not advisable to answer them now.

ಶ್ರೀ ಇ. ನಾರಾಯಣ ಗೌಡ.—ಈ ಎರಡು ಪೊಕದ್ದಮೆಗಳಲ್ಲಿ ಕೂಡ ಅಪರಾಧಿಗಳಾಗಿರುವವರೆಲ್ಲ ಅಧಿಕಾರಿಗಳೇ, ಕಂಟ್ರಾಕ್ಟರುಗಳೇ ಅಥವಾ ಖಾಸಗಿಯವರೇ, ಸ್ವಾಮಿ?

Mr. SPEAKER.—Is it pending in the court?

Sri R. M. PATIL.—No, Sir. It is not yet 'Aparadhi.'

ಶ್ರೀ ಎಸ್. ಗೋಪಾಲ ಗೌಡ.—ಈ ಅಕ್ರಮ ಸಾಗಾಣಿಕೆಯಲ್ಲಿ ತಾಳಗುಪ್ಪದಲ್ಲಿ ಒಂದು ರೈಲ್ವೆ ವ್ಯಾಗನ್ನಿನಲ್ಲಿ ಇದ್ದ ಉಕ್ಕು ಸೇರಿದೆಯೇ, ಸ್ವಾಮಿ?

Sri R. M. PATIL.—These details are not here.